ಶ್ರೀ ಸಿ. ಬೈರೇಗೌಡ (ಮೀನಂಗಾರಿಕೆ ಮತ್ತು ಬಂದರು ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಗೆ ೫೦ ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಮೀನಂಗಾರರು ಇದನ್ನು ಪಡೆದು ಕೊಳ್ಳಬೇಕಾಗಿದೆ.

ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಸಿಬ್ಬಂದಿಯಲ್ಲಿನ ಉದ್ದೇಶ ಬಲ್ಲವರ ಬಗ್ಗೆ

೬೨೩. ಶ್ರೀಮತಿ ಮುಕ್ತರತ್ನಿಸಾ (ನರಸಿಂಹರಾಜ).—ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ—

ಅ) ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯಲ್ಲಿ ಉರ್ದು ಬಲ್ಲವರ ಸಂಖ್ಯೆ ;

ಆ) ಕರ್ನಾಟಕ ಸರ್ಕಾರವು ಉರ್ದು ಪತ್ರಿಕೆಗಳಿಗೆ ಪತ್ರಿಕಾ ಪ್ರಕಟಣೆಗಳನ್ನು ಉರ್ದು ಭಾಷೆಯಲ್ಲಿ ಬಿಡುಗಡೆ ಮಾಡುತ್ತಿದೆಯೇ ?

ಇ) ವಿಶ್ವ ಕನ್ನಡ ಸಮ್ಮೇಳನಕ್ಕೆ ಆಹ್ವಾನಿಸಲಾದ ಉರ್ದು ಕವಿಗಳು, ಪತ್ರಕರ್ತರು, ಬರಹಗಾರರು ಸಾಹಿತಿಗಳ ಸಂಖ್ಯೆ

ಶ್ರೀ ಜೀವರಾಜ ಆಳ್ವ (ವಾರ್ತಾ ಮತ್ತು ಪ್ರಚಾರ ಸಚಿವರು).—

ಅ) ೩೨

ಆ) ಇಲ್ಲ

ಇ) ೪೦

ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯಲ್ಲಿ ಔಷಧ ತಯಾರಿಕೆ

೪೭೯. ಶ್ರೀ ಕೆ. ಹೆಚ್. ಶ್ರೀನಿವಾಸ (ಶಿವಮೊಗ್ಗ) ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧. ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯಲ್ಲಿ ಔಷಧ ತಯಾರಿಕ ಘಟಕ ಕಟ್ಟಲು ಪ್ರಸ್ತಾವನೆ ಇರುವುದು ನಿಜವಲ್ಲವೆ ?

೨. ಇದಕ್ಕಾಗಿ ಸರ್ಕಾರವು ಆಯವ್ಯಯ ಪಟ್ಟಿಯಲ್ಲಿ ಹಣ ಒದಗಿಸಿದ್ದು ನಿಜವಲ್ಲವೇ ?

೩. ಸರ್ಕಾರಿ ಶಿಲ್ಪಿಯವು ಇನ್ನೂ ಒಪ್ಪಿಗೆ ಕೊಟ್ಟಿಲ್ಲವಾದ್ದರಿಂದ ಕೆಲಸವನ್ನು ಪ್ರಾರಂಭಿಸಿಲ್ಲವೆನ್ನುವುದು ನಿಜವೇ ?

೪. ಹಾಗಾದರೆ ಇದನ್ನು ತ್ವರಿತ ಗೊಳಿಸಲು ಸರ್ಕಾರವು ಯಾವ ಕ್ರಮವನ್ನು ಕೈಗೊಳ್ಳುವುದು?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

೧. ನಿಜ

೨. ಹೌದು

೩. ಹೌದು

೪. ಸೂಕ್ತವಾದ ನಿರ್ದೇಶನವನ್ನು ನಿಗದಿಪಡಿಸಲು ಮುಖ್ಯ ಶಿಲ್ಪಿಯವರನ್ನು ಕೋರಲಾಗಿದೆ.

ನಿಲುವಳಿ ಸೂಚನೆ ಪ್ರಸ್ತಾಪ

ವಿಧಾನ ಪರಿಷತ್ತನ್ನು ಮುಂದೂಡಿದ ಬಗ್ಗೆ

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೆ.....

Adjornment motion.—regarding Convening Session of Legislative Council